ಸಮಗ್ರ ಶಿಕ್ಷಣ ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಕೆ ಆರ್ ವೃತ್ತ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ: ಸಶಿಅ/ಆಚ/ಅಭೂಜಯೋ/01/2022-23

ದಿನಾಂಕ:2.11.2022

**ಸುತ್ತೋಲೆ**

**ವಿಷಯ:** ಅಟಲ್ ಭೂ ಜಲ ಯೋಜನಾ ಜಾರಿಗೊಳ್ಳುತ್ತಿರುವ ರಾಜ್ಯದ 14 ಜಿಲ್ಲೆಗಳ ಶಾಲೆಗಳಲ್ಲಿ ನವೆಂಬರ್ 14.2022 ರಂದು ಆಚರಿಸುವ **"ಮಕ್ಕಳ ದಿನಾಚರಣೆ"** ಅಂಗವಾಗಿ ಅಮೂಲ್ಯವಾದ ಅಂತರ್ಜಲ ಮಹತ್ವ ಹಾಗೂ ನಿರ್ವಹಣೆ ಕುರಿತು ಶಾಲಾ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಕುರಿತು.

**ಉಲ್ಲೇಖ:** ಯೋಜನಾ ನಿರ್ದೇಶಕರು, ರಾಜ್ಯ ಕಾರ್ಯಕ್ರಮ ನಿರ್ವಹಣಾ ಘಟಕ, ಅಟಲ್ ಭೂ ಜಲ ಯೋಜನೆ, ಬೆಂಗಳೂರು ರವರ ಪತ್ರ ಸಂಖ್ಯೆ: Atal jal /SPMU/04/SDE/2022-23/230 ಮತ್ತು ದಿನಾಂಕ:18/10/2022.

**************

ಉಲ್ಲೇಖಿತ ವಿಷಯಕ್ಕೆ ಸಂಬಂಧಿಸಿದಂತೆ ಸನ್ಮಾನ್ಯ ಪ್ರಧಾನ ಮಂತ್ರಿಗಳು ದಿನಾಂಕ: 25.12.2019 ರಂದು ಮಾಜಿ ಪ್ರಧಾನ ಮಂತ್ರಿ ದಿ|| ಶ್ರೀ ಅಟಲ್ ಬಿಹಾರಿ ವಾಜಪೇಯಿರವರ 95ನೇ ಜನ್ಮ ದಿನದ ಸ್ಮರಣಾರ್ಥವಾಗಿ **"ಅಟಲ್ ಭೂ ಜಲ ಯೋಜನೆ"** ಯನ್ನು ಲೋಕಾರ್ಪಣೆ ಮಾಡಿರುತ್ತಾರೆ.

2017 ರಲ್ಲಿ ನಡೆಸಲಾದ ಅಂತರ್ಜಲ ಮೌಲೀಕರಣ ಹಾಗೂ ವೈಜ್ಞಾನಿಕ ಅಧ್ಯಯನಗಳ ಆಧಾರದ ಮೇಲೆ ಅಂತರ್ಜಲ ಅತಿಯಾಗಿ ಬಳಕೆಯಾಗುತ್ತಿರುವ ಏಳು ರಾಜ್ಯಗಳನ್ನು ಅಟಲ್ ಭೂ ಜಲ ಯೋಜನೆಯಡಿಯಲ್ಲಿ ಆಯ್ಕೆ ಮಾಡಲಾಗಿದ್ದು, ಈ ಪೈಕಿ ಕರ್ನಾಟಕ ರಾಜ್ಯವು ಒಂದು. ಈ ಯೋಜನೆಯನ್ನು ಅಂತರ್ಜಲದ ತೀವ್ರ ಕೊರತೆ ಎದುರಿಸುತ್ತಿರುವ ರಾಜ್ಯದ 14 ಜಿಲ್ಲೆಗಳ 41 ತಾಲ್ಲೂಕುಗಳ (ಅನುಬಂಧ-01ರಲ್ಲಿ ತಾಲ್ಲೂಕುವಾರು ಪಟ್ಟಿ ಲಗತ್ತಿಸಿದೆ) 1199 ಗ್ರಾಮ ಪಂಚಾಯಿತಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಸಮುದಾಯದ ಸಕ್ರಿಯ ಸಹಭಾಗಿತ್ವದಲ್ಲಿ ಈ ಯೋಜನೆಯು ಅನುಷ್ಠಾನವಾಗಬೇಕಿದ್ದು, ಸಮುದಾಯದ ನಡವಳಿಕೆಯಲ್ಲಿ ಬದಲಾವಣೆ ತರುವ ಮೂಲಕ ದೀರ್ಘಕಾಲಿಕ ಸುಸ್ಥಿರ ಅಂತರ್ಜಲ ನಿರ್ವಹಣೆ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಮಹಿಳೆಯರು ಮತ್ತು ಮಕ್ಕಳು ಸಮುದಾಯದ ಮುಖ್ಯ ಭಾಗವಾಗಿರುವುದರಿಂದ ಕಲಿಯುವ ಮಕ್ಕಳಲ್ಲಿ ಅಂತರ್ಜಲದ ಮಹತ್ವದ ಹಾಗೂ ನಿರ್ವಹಣೆಯ ಕುರಿತು ಜಾಗೃತಿ ಮೂಡಿಸುವುದು ಇಂದಿನ ಮುಖ್ಯ ಆದ್ಯತೆಯಾಗಿದೆ.

ಈ ಹಿನ್ನೆಲೆಯಲ್ಲಿ ಶಿಕ್ಷಕರು ದಿನಾಂಕ:14.11.2022 ರಂದು ನಡೆಯಲಿರುವ **"ಮಕ್ಕಳ ದಿನಾಚರಣೆ"** ಕಾರ್ಯಕ್ರಮದ ಅಂಗವಾಗಿ ಅಂತರ್ಜಲದ ಮಹತ್ವವನ್ನು ಬಿಂಬಿಸುವ ಚಟುವಟಿಕೆಗಳನ್ನು ಮಕ್ಕಳ ಮೂಲಕ ಹಮ್ಮಿಕೊಳ್ಳುವುದು.

**ಶಾಲಾ ಹಂತದಲ್ಲಿ ಶಿಕ್ಷಕರು ಹಮ್ಮಿಕೊಳ್ಳಬೇಕಾದ ಚಟುವಟಿಕೆಗಳು:-**

- 5 ರಿಂದ 7ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಂತರ್ಜಲದ ಮಹತ್ವದ ಕುರಿತು ಚಿತ್ರಕಲೆ (Drawing) ಹಾಗೂ ಘೋಷ ವಾಕ್ಯಗಳನ್ನು (Slogan writing) ಬರೆಯುವ ಸ್ಪರ್ಧೆ ಏರ್ಪಡಿಸುವುದು.
- 8 ರಿಂದ 10ನೇ ತರಗತಿವರೆಗಿನ ಮಕ್ಕಳಿಗೆ ಅಂತರ್ಜಲದ ಮಹತ್ವದ ಬಗ್ಗೆ ಚರ್ಚಾ ಸ್ಪರ್ಧೆ ನಡೆಸುವುದು.
- ನೀರಿನ ಉಳಿತಾಯ, ಮಿತ ಬಳಕೆ ಮತ್ತು ಪ್ರಾಮುಖ್ಯತೆಯನ್ನು ಮನವರಿಕೆ ಮಾಡುವ ಕುರಿತು ಜನಪದ ಗೀತೆ/ಹಾಡುಗಳನ್ನು ಹಾಡುವುದು.
- ಅಂತರ್ಜಲದ ಪ್ರಾಮುಖ್ಯತೆ ಮತ್ತು ನೀರಿನ ಉಳಿತಾಯದ ಪ್ರಾಮುಖ್ಯತೆಯ ಕುರಿತು ಗ್ರಾಮದ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತಾ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ವಿದ್ಯಾರ್ಥಿಗಳಿಗೆ ಅಂತರ್ಜಲದ ಮಹತ್ವ ಹಾಗೂ ನೀರಿನ ಮಿತ ಬಳಕೆಯ ವಿಧಾನಗಳ ಬಗ್ಗೆ ಹೆಚ್ಚಿನ ಅರಿವು ಹಾಗೂ ತಿಳುವಳಿಕೆ ಮೂಡಿಸುವುದು ಹಾಗೂ ಈ ಮಹತ್ವದ ಸಂದೇಶವನ್ನು ಮನೆಯಲ್ಲಿರುವ ತಂದೆ –ತಾಯಂದಿರಿಗೆ ತಿಳಿಸಲು ಸೂಚಿಸುವುದು.

ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಆಡಳಿತ) ರವರು ಶಾಲಾ ಹಂತದಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಅಂತರ್ಜಲದ ಮಹತ್ವದ ಹಾಗೂ ನೀರಿನ ಮಿತ ಬಳಕೆ ಕುರಿತು ಚಟುವಟಿಕೆಗಳನ್ನು ಹಮ್ಮಿಕೊಳ್ಳುವಂತೆ ಸೂಕ್ತ ಕ್ರಮ ವಹಿಸುವುದು ಹಾಗೂ ಶಾಲಾ ಹಂತದಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಿದ ಬಗ್ಗೆ ಘೋಟೊ ಸಹಿತ ಮಾಹಿತಿಯನ್ನು ಕ್ರೋಢಿಕರಿಸಿ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ kar.abhy.sde@gmail.comಗೆ ಸಲ್ಲಿಸಲು ಸೂಚಿಸಿದೆ.

20.10.2020

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ.

**ಅಗತ್ಯ ಕ್ರಮಕ್ಕಾಗಿ,**

1.ಅಟಲ್ ಭೂ ಜಲ ಯೋಜನೆಯಡಿ ಆಯ್ಕೆಯಾದ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ.
2.ಅಟಲ್ ಭೂ ಜಲ ಯೋಜನೆಯಡಿ ಆಯ್ಕೆಯಾದ ಜಿಲ್ಲೆಗಳ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ.

**ಮಾಹಿತಿಗಾಗಿ**

1.ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
2.ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಅನುಬಂಧ-1

ಅಟಲ್ ಭೂಜಲ ಯೋಜನೆಯ 14 ಜಿಲ್ಲೆಗಳ 41 ತಾಲ್ಲೂಕುಗಳ ಪಟ್ಟಿ

| Sl No | Districts | Taluks |
|---|---|---|
| 1 | Bagalkot | Badami |
| 2 | Bagalkot | Bagalkot |
| 3 | Bangalore Rural | Devanahalli |
| 4 | Bangalore Rural | Doddaballapura |
| 5 | Bangalore Rural | Hoskote |
| 6 | Bangalore Rural | Nelamangala |
| 7 | Belagavi | Athni |
| 8 | Belagavi | Ramdurga |
| 9 | Bellari | Hagribommanahalli |
| 10 | Bellari | Harapanahalli |
| 11 | Chamarajanagara | Gund lupet |
| 12 | Chikkaballapura | Bagepalli |
| 13 | Chikkaballapura | Chikkaballapura |
| 14 | Chikkaballapura | Chintamani |
| 15 | Chikkaballapura | Gauribidanur |
| 16 | Chikkaballapura | Gudibanda |
| 17 | Chikkaballapura | S iddhalaghatta |
| 18 | Chikkamagaluru | Kadur |
| 19 | Chitradurga | Challakere |
| 20 | Chitradurga | Chitradurga |
| 21 | Chitradurga | Hiriyur |
| 22 | Chitradurga | Holalkere |
| 23 | Chitradurga | Hosdurga |
| 24 | Davanagere | Channagiri |
| 25 | Davanagere | Jagaluru |
| 26 | Gadag | Gadag |
| 27 | Gadag | Ron |
| 28 | Hassan | Arsikere |
| 29 | Kolar | Bangarpete |
| 30 | Kolar | Kolar |
| c1 | Kolar | Malur |
| 32 | Kolar | Mulbagal |
| 33 | Kolar | Srinivaspur |
| 34 | Ramanagara | Kanakapura |
| 35 | Ramanagara | Ramanagara |
| 36 | Tumkur | Cliikkanayakanahalli |
| 37 | Tumkur | Koratagere |
| 38 | Tumkur | Madhugiri |
| 39 | Tumkur | Sira |
| 40 | Tumkur | Tiptur |
| 41 | Tumkur | Tumakuru |

# ನಮೂನೆ

**ಅಂತರ್ಜಲದ ಮಹತ್ವದ ಹಾಗೂ ನೀರಿನ ಮಿತ ಬಳಕೆ ಕುರಿತು ಚಟುವಟಿಕೆಗಳನ್ನು ಹಮ್ಮಿಕೊಂಡ ಬಗ್ಗೆ ವರದಿ**

| ಕ್ರ ಸಂ | ಜಿಲ್ಲೆಯ ಹೆಸರು | ತಾಲ್ಲೂಕು | ಗ್ರಾಮ ಮತ್ತು ಗ್ರಾಮ ಪಂಚಾಯಿತಿಯ ಹೆಸರು | ಶಾಲೆಯ ಹೆಸರು ಮತ್ತು ವಿಳಾಸ | ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಸಂಖ್ಯೆ | | | ಕಾರ್ಯಕ್ರಮದ ಕನಿಷ್ಟ 2 ಫೋಟೋಗಳನ್ನು ಇ-ಮೇಲ್ ವಿಳಾಸಕ್ಕೆ JPG Formatನಲ್ಲಿ attach ಮಾಡಿ ಕಳುಹಿಸುವುದು. |
|---|---|---|---|---|---|---|---|---|
| | | | | | ಗಂಡು | ಹೆಣ್ಣು | ಒಟ್ಟು | |
| | | | | | | | | |

ಉಪನಿರ್ದೇಶಕರು (ಆಡಳಿತ)
(ಸಹಿ ಮತ್ತು ಮೊಹರಿನೊಂದಿಗೆ)